

ಜಾಡಿಸುತ್ತಿದ್ದರು. ಆ ಹುಡುಗನೂ ಅಷ್ಟೇ ಒಂದು ಗಂಟೆಯಿಂದಲೂ ಇರಿಟೇಡ್ ಮಾಡುತ್ತಿದ್ದ. ಡ್ರೈವರಿಗೆ ಅನಗತ್ಯ ಸೂಚನೆ ಕೊಟ್ಟು ಸತಾಯಿಸುತ್ತಿದ್ದ. ಇವನ ಕಾರಣಕ್ಕೆ ಮೊದಲಿಗೆ ಸೇತುವೆ ಕೆಳಗೆ ಮಲಗಿದ್ದ ಗಂಡು ಹುಲಿಯನ್ನೂ ನಾವು ಗಮನಿಸದೆ ಮುಂದೆ ಹೋಗಿ ಬಿಟ್ಟೆವು. ನಾವು ಹೊರಡುವ ಮುನ್ನ ಇಲಾಖೆಯ ನೈಟ್ ವಾಚರ್ ಒಬ್ಬರು ಸಿಕ್ಕು ಮಾಹಿತಿ ಕೊಟ್ಟಿದ್ದರು. ದೊಡ್ಡ ಸೇತುವೆ ಬಳಿ ರಾತ್ರಿ ಹುಲಿ ಸತತವಾಗಿ ಘರ್ಜನೆ ಮಾಡಿದ್ದಾಗಿಯೂ, ಮೊದಲು ಅಲ್ಲಿ ಗಮನಿಸಿಕೊಂಡು ನೀವು ಮುಂದೆ ಹೋಗುವುದು ಒಳ್ಳೆಯದೆಂದೂ ಸೂಚನೆ ಕೊಟ್ಟಿದ್ದರು. ಅಲ್ಲಿ ಜೀಪು ನಿಂತಾಗ ಉಡಾಫೆಯ ಈ ಹುಡುಗ, 'ಈಗ ಅದು ಇಲ್ಲಿ ಎಲ್ಲಿರುತ್ತೆ. ನಾ ಹೇಳಿದ ಕಡೆ ಗಾಡಿ ಓಡಿಸಿ ನನಗೆಲ್ಲಾ ಗೊತ್ತು' ಎಂದು ದಿಕ್ಕು ತಪ್ಪಿಸಿ ಅಲ್ಲೇ ಅವಿತಿದ್ದ ಹುಲಿಯ ಮುಖ ಕೂಡ ನೋಡದಂತೆ ಮಾಡಿ ಹಾಕಿದ್ದ. ನಾನು ಮೊದಲಿಗೆ ಈ ಹುಡುಗ ಹುಲಿಯ ಜಾಡು ಬಲ್ಲ ಜಾಣನಿರಬೇಕು. ಇವನ ಪ್ರಯತ್ನದಿಂದ ಕೊಂಚ ಉಪಯೋಗವೂ ಆದರೆ ಆಗಲೆಂದು ಮಳ್ಳನಂತೆ ನಂಬಿ ಕೂತಿದ್ದು ಮೂರ್ಖತನವೆನಿಸಿತು. ಈ ಬೇಸರ ಬಿಗಿಯಾಗಿ ಬಾಕಿ ಉಳಿಸಿಕೊಂಡಿದ್ದ ಡಾಕ್ಟ್ರು ಎರಡನೆಯ ಸಲದ ಒಳ್ಳೆಯ ಛಾನ್ಸೂ ಕೂಡ ಕಣ್ಣೆದುರಿಗೇ ಕಮರಿಹೋದಾಗ ಬೆಂಕಿಯ ಚೆಂಡಾದರು.

ಕೊಂಚ ಲೂಸು ಲೂಸಾಗಿ ಆಡುತ್ತಿದ್ದ ಆ ಹುಡುಗನೂ ಡಾಕ್ಟ್ರು ಮೇಲೆ ಅಷ್ಟೇ ವೇಗವಾಗಿ ಫಟಾರೆಂದು ತಿರುಗಿ ಬಿದ್ದ. 'ರೀ ಸುಮ್ನೆ ಕುತ್ಕೊಳ್ರಿ. ವರ್ಷಕ್ಕೆ ಒಂದೆರಡು ಬಾರಿ ಬರೋ ನಿಮ್ಮದೇನ್ರಿ ರೋಪು. ನಂಗೆ ಇಲ್ಲಿಯ ಇಂಚಿಂಚೂ ಗೊತ್ತಿದೆ. ನಾನಿಲ್ಲಿ ರೆಗ್ಯೂಲರ್ ವಿಸಿಟರ್. ಹುಲಿ ಎಲ್ಲಿಂದ ಹೊರಟು ಎಲ್ಲಿಗೆ ಹೋಗುತ್ತೆ? ಎಲ್ಲಿ ನೀರು ಕುಡಿಯುತ್ತೆ. ಎಲ್ಲೆಲ್ಲಿ ಸೆಂಟ್ ಮಾರ್ಕ್ ಮಾಡುತ್ತೆ! ಅದರ ಟೆರಿಟರಿ ರೆಡಿಯೇಸ್ ಎಷ್ಟು ಎಲ್ಲಾ ನಂಗೊತ್ತು. ಬಂದ್ಬಿಟ್ರು ಹೇಳೋಕೆ. ಯಾವ ಪೊಸಶನ್ನಿನಲ್ಲಿ ಜೀಪು ನಿಲ್ಲಿಸಬೇಕು. ಹುಲಿ ಹೆಂಗೆ ತಿರುಗಿ ಪೋಸು ಕೊಡುತ್ತೆ ಅನ್ನೋದು ನಂಗಿಂತ ಚೆನ್ನಾಗಿ ನಿಮಗೆ ಗೊತ್ತೇನ್ರಿ?' ಎಂದು ಸವಾಲು ಎಸೆಯುವವನಂತೆ ಒದರಿ ಹಾಕಿದ. ತಪ್ಪು ಮಾಡಿಯೂ ಭಂಡ ವಾದ ಮಾಡಲು ನಿಂತ ಆ ಹುಡುಗನ ಮಾತಿನ ವೈಖರಿ ನನಗೂ ಹಿಡಿಸಲಿಲ್ಲ. ನಾನೂ ಜೋರು ಮಾಡಿದೆ.

ತನ್ನ ಗೆಣೆಕಾತಿಯ ಜೊತೆ ಬಂದಿದ್ದ ಆ ಹುಡುಗ ತುಂಬಾ ಜೋಶಿನಲ್ಲಿದ್ದ. ಆಗಾಗ ಕಿಸಕ್ಕೆಂದು ನಕ್ಕು ಇವನ ಯೌವ್ವನ ಕೆರಳಿಸುವ ಪ್ರಿಯತಮೆಗೆ ಇಂಪ್ರೆಸ್